ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	ಶ್ರೀ ಆರ್. ಧರ್ಮಸೇನ್
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	29 (174)
ಉತ್ತರಿಸಬೇಕಾದ ದಿನಾಂಕ	:	03.03.2020

<table>
<tr><th>ಕ್ರ ಸಂ</th><th>ಚುಕ್ಕೆ ಗುರುತಿನ ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಎಷ್ಟು ಸಹಕಾರಿ ಬ್ಯಾಂಕುಗಳಿವೆ: ಇವುಗಳ ನಿಯಂತ್ರಣ ಯಾವ ಅಧೀನದಲ್ಲಿ ಬರುತ್ತದೆ:</td><td>ಸಹಕಾರ ಕ್ಷೇತ್ರದಲ್ಲಿ ಕೃಷಿಯೇತರ ಮತ್ತು ಕೃಷಿ ಉದ್ದೇಶಕ್ಕಾಗಿ ಸಾಲ ನೀಡುವ ಸಹಕಾರ ಬ್ಯಾಂಕುಗಳು ಅಸ್ತಿತ್ವದಲ್ಲಿವೆ. ಆ ಪ್ರಕಾರ ರಾಜ್ಯದಲ್ಲಿ ಒಟ್ಟು 266 ಪಟ್ಟಣ ಸಹಕಾರ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ, 18 ಸೌಹಾರ್ದ ಸಹಕಾರ ಬ್ಯಾಂಕುಗಳು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೊಂದಣಿಗೊಂಡು ಕಾರ್ಯನಿರ್ವಹಿಸುತ್ತಿವೆ.

ಕೃಷಿ ಸಾಲ ನೀಡುವ ಉದ್ದೇಶಕ್ಕಾಗಿ ಇರುವ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ರಾಜ್ಯ ಮಟ್ಟದಲ್ಲಿ ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕ್ ನಿ, ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಇವೆ.

ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ನಿಯಂತ್ರಣ ಭಾರತೀಯ ರಿಸರ್ವ್ ಬ್ಯಾಂಕ್ ಇಂಡಿಯಾ, ನಬಾರ್ಡ್ ಹಾಗೂ ಸಹಕಾರ ಇಲಾಖೆಯ ಅಧೀನದಲ್ಲಿರುತ್ತದೆ.

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಬಾರ್ಡ್ ಹಾಗೂ ಸಹಕಾರ ಇಲಾಖೆಯ ಅಧೀನದಲ್ಲಿರುತ್ತದೆ</td></tr>
<tr><td>ಆ</td><td>ಹಣ ದುರುಪಯೋಗ ಮಾಡಿ ಗ್ರಾಹಕರಿಗೆ ನಷ್ಟ ಉಂಟು ಮಾಡಿರುವ ಬ್ಯಾಂಕುಗಳ ಸಂಖ್ಯೆ ಎಷ್ಟು : (ಬೆಂಗಳೂರು ನಗರದ ಕಳೆದ ಎರಡು ವರ್ಷಗಳ ಮಾಹಿತಿ ನೀಡುವುದು)</td><td>ಬೆಂಗಳೂರು ನಗರದಲ್ಲಿ ಕಳೆದ 2 ವರ್ಷಗಳಲ್ಲಿ ಕೆಳಕಂಡ 3 ಸಹಕಾರ ಬ್ಯಾಂಕುಗಳಲ್ಲಿ ಹಣದುರುಪಯೋಗವಾಗಿರುವ ವಿವರಗಳು ತಿಳಿದುಬಂದಿದ್ದು, ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ</th><th>ಬ್ಯಾಂಕಿನ ಹೆಸರು</th><th>ತೆಗೆದುಕೊಂಡು ಕ್ರಮದ ಸಕ್ಷಿಪ್ತ ವಿವರ</th></tr>
<tr><td>1</td><td>ದೀಪಕ್ ಸಹಕಾರ ಬ್ಯಾಂಕ್ ನಿ, ಬೆಂಗಳೂರು</td><td>ಈ ಬ್ಯಾಂಕಿನ ಸಾಲ ನೀಡಿಕೆಯಲ್ಲಿ ಅವ್ಯವಹಾರ ಉಂಟಾಗಿದೆ ಎಂಬ ದೂರಿನ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರಡಿಯಲ್ಲಿ ವಿಚಾರಣೆ ನಡೆಸಿದ್ದು, ಸಾಲ ನೀಡುವಲ್ಲಿ ರೂ.3.67ಕೋಟಿ ಮೊತ್ತ ಅವ್ಯವಹಾರ ಗುರುತಿಸಿದ್ದು, ಇದರ ವಸೂಲಾತಿಗೆ ಪ್ರಕರಣ 68ರಡಿಯಲ್ಲಿ ನಿರ್ದೇಶನ ನೀಡಲಾಗಿದೆ.</td></tr>
<tr><td>2</td><td>ಅರುಣಾ ಸಹಕಾರ ಬ್ಯಾಂಕ್ ನಿ, ಬೆಂಗಳೂರು.</td><td>ಭಾರತೀಯ ರಿಸರ್ವ್ ಬ್ಯಾಂಕಿನವರು ಕೈಗೊಂಡ ಪರಿವೀಕ್ಷಣಾ ಸಂದರ್ಭದಲ್ಲಿ ಹಣದುರುಪಯೋಗ ವಾಗಿರುವುದು ಕಂಡು ಬಂದ ಹಿನ್ನಲೆಯಲ್ಲಿ ಕರ್ನಾಟಕ</td></tr>
</table></td></tr>
</table>

				ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 65 ರಡಿಯಲ್ಲಿ ಪರಿವೀಕ್ಷಣೆ ನಡೆಸಲಾಗಿರುತ್ತದೆ. ಸದರಿ ವರದಿಯಲ್ಲಿ ಬ್ಯಾಂಕಿನಲ್ಲಿ ರೂ.1229.25 ಲಕ್ಷಗಳು ಹಣ ದುರುಪಯೋಗವಾಗಿರುವುದು ಸಾಬೀತಾಗಿದ್ದು, ಈ ಹಣ ವಸೂಲಾತಿಗೆ ಬ್ಯಾಂಕಿಗೆ ನಿರ್ದೇಶನ ನೀಡಲಾಗಿದ್ದು, ಆಡಳಿತಾಧಿಕಾರಿಯನ್ನು ನೇಮಿಸಲಾಗಿರುತ್ತದೆ.
		3	ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು	ಭಾರತೀಯ ರಿಸರ್ವ್ ಬ್ಯಾಂಕ್ ರವರು ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಬ್ಯಾಂಕಿನಲ್ಲಿ 2876 ಸಾಲ ಪ್ರಕರಣಗಳಲ್ಲಿ ರೂ.1,54,443.84 ಲಕ್ಷದ ಸಾಲಗಳಿಗೆ ಸಂಬಂಧಪಟ್ಟಂತೆ ಯಾವುದೇ ಕಡತಗಳು ಲಭ್ಯವಿಲ್ಲದಿರುವುದು ಕಂಡುಬಂದಿದೆ. ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲು ಪ್ರಕರಣ 64 ರಡಿ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿರುವುದಾಗಿ ತಿಳಿಸಿರುತ್ತಾರೆ. ವಿಚಾರಣಾ ವರದಿ ಆಧರಿಸಿ ಮುಂದಿನ ಕ್ರಮವಿಡಲಾಗುವುದು.
				ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ನೋಂದಣಿಯಾಗಿರುವ ಸೌಹಾರ್ದ ಸಹಕಾರ ಬ್ಯಾಂಕುಗಳಲ್ಲಿ ಮತ್ತು ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಕಾಸ್ಕಾರ್ಡ್ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಇವುಗಳಲ್ಲಿ ಹಣದುರುಪಯೋಗ ಮಾಡಿರುವ ದೂರುಗಳಿದ್ದು, ಗ್ರಾಹಕರಿಗೆ ನಷ್ಟ ಉಂಟು ಮಾಡಿರುವ ಪ್ರಕರಣಗಳು ವರದಿಯಾಗಿಲ್ಲ.
ಇ	ಎಷ್ಟು ಬ್ಯಾಂಕುಗಳ ಮೇಲೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ?	ದೀಪಕ್ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಮತ್ತು ಅರುಣಾ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಈ 2 ಬ್ಯಾಂಕುಗಳ ಮೇಲೆ ನ್ಯೂನತೆಗಳನ್ನು ಸರಿಪಡಿಸಲು ಪ್ರಕರಣ 68 ರಡಿಯಲ್ಲಿ ನಿರ್ದೇಶನ ನೀಡಿ ಹಣ ವಸೂಲಾತಿಗೆ ನಿರ್ದೇಶಿಸಲಾಗಿದೆ ಹಾಗೂ ಈ ರೀತಿ ಲೋಪವೆಸಗಿದವರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಜರುಗಿಸಲು ಆದೇಶಿಸಿದೆ.		

[illegible] 14 ಜುಲೈ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು